

‘ಕೋಟಿಗೊಬ್ಬ 3’ ಚಿತ್ರದಲ್ಲಿ ಸುದೀಪ್



‘ಯುವರತ್ನ’ ಚಿತ್ರದಲ್ಲಿ ಪುನೀತ್

ಕುಸಿಯುತ್ತಿರುವುದರ ಕಡೆಗೆ ನಮ್ಮ ಗಮನ ಹರಿಯದಂತೆ ನೋಡಿಕೊಳ್ಳುತ್ತದೆ. ಹಾಗೆ ನೋಡಿದರೆ ಮೇಲೆ ಉಲ್ಲೇಖಿಸಿದ ಸಿನಿಮಾ ಪ್ರಚಾರಕರ್ತರಿಗೂ ಇಂದಿನ ಚಿತ್ರರಂಗಕ್ಕೂ ಯಾವ ವ್ಯತ್ಯಾಸವೂ ಇಲ್ಲ. ವ್ಯತ್ಯಾಸ ಹುಡುಕುವುದಾದರೆ ಇಷ್ಟೇ: ಅಲ್ಲಿ ಆಸ್ಪತ್ರೆಯ ಬಿಲ್ ಕಟ್ಟಲಾಗದೆ ಸೋತು ಕೂತಿದ್ದ ಹಿರಿಯರ ಸಂಕಷ್ಟ ಯಾರಿಗೂ ಕಾಣಿಸಲೇ ಇಲ್ಲ. ಇಲ್ಲಿ ಒಳಗೊಳಗೇ ಒಣಗುತ್ತಿರುವ ಜೀವದ್ರವ್ಯವನ್ನು ಕಾಣಲು ಹೊರಗಿನ ಬಣ್ಣದ ಬೆಗಡೆ ಬಿಡುತ್ತಿಲ್ಲ.

ಹೌದು! ಚಂದನವನದಲ್ಲಿ ನಿಂತಿರುವ ಪರಿಮಳದ ಸಿನಿಮಾಸುಂದರಿ ನಿಂತ ನೆಲ ಇಂಚಿಂಚಾಗಿ ಕುಸಿಯುತ್ತಿದೆ. ಇನ್ನಿಲ್ಲದ ಕತ್ತಲ ಪಾತಾಳದತ್ತ ಅವಳು ಜಾರುತ್ತಿದ್ದಾಳೆ.

## ಸ್ಟಾರ್ ಸಿನಿಮಾಗಳು ಏನಾದವು?

2020ರ ಕೊರೊನಾ ಕರಾಳ ದಿನಗಳು ಕಳೆದು ಮತ್ತೆ ಚಿತ್ರರಂಗದಲ್ಲಿ ಚಟುವಟಿಕೆಗಳು ಆರಂಭವಾದಾಗ ಎಲ್ಲರಲ್ಲಿಯೂ ಒಂದು ವಿಶ್ವಾಸವಿತ್ತು. ‘ಜನರಿಗೆ ಲಾಕ್‌ಡೌನ್ ಮನೆವಾಸ ಸಾಕಾಗಿದೆ, ಕಿರುಪರದೆಗಳಲ್ಲಿ ಚಿತ್ರ ನೋಡಿ ಬೋರಾಗಿದೆ. ಚಿತ್ರಮಂದಿರಗಳು ತೆರೆದ ತಕ್ಷಣ ಜನರು ಹೇಗೆ ಮುಗಿಬೀಳುತ್ತಾರೆ ನೋಡಿ’ ಎಂದು ಸಾಕಷ್ಟು ಸಿನಿಮಾಮಂದಿ ವಿಶ್ವಾಸದಿಂದ ಹೇಳಿಕೊಂಡಿದ್ದರು. ಅವರ ವಿಶ್ವಾಸಕ್ಕೆ ಜನರ ಮನಃಸ್ಥಿತಿಯ ಕುರಿತ ಅಂದಾಜಷ್ಟೇ ಕಾರಣ ಆಗಿರಲಿಲ್ಲ. ಬಿಡುಗಡೆಗೆ ರೆಡಿಯಾಗಿ ನಿಂತಿದ್ದ ಸ್ಟಾರ್ ನಟರ ಸಾಲು ಸಾಲು ಚಿತ್ರಗಳೂ ಅವರ ನಂಬಿಕೆಗೆ ಬಲ ನೀಡಿದ್ದವು. ಧ್ರುವ ಸರ್ಜಾ ಅಭಿನಯದ ‘ಪೊಗರು’, ದರ್ಶನ್ ಅಭಿನಯದ ‘ರಾಬರ್ಟ್’,

## ನಾಳೆಯ ಬಗ್ಗೆ ಯೋಚಿಸಿದರೆ ಭಯವಾಗುತ್ತದೆ



ಕಳೆದ ಜನವರಿಯಿಂದ ಒಂದಿಷ್ಟು ಕೆಲಸಗಳು ಬರಲಾರಂಭಿಸಿದ್ದವು. ಆದರೆ ಈಗ ಮತ್ತೆ ಎಲ್ಲವೂ ನಿಂತುಹೋಗುತ್ತಿವೆ. ನೈಟ್ ಕರ್ಫ್ಯೂನಿಂದ ನಮಗೆ ಕಷ್ಟವಾಗುತ್ತದೆ. ಆರು ಗಂಟೆಗೆ ಪ್ಯಾಕಪ್ ಆದರೆ ನಾವು ಸೆಟ್‌ನ ಸಾಮಗ್ರಿಗಳನ್ನೆಲ್ಲ ಗಾಡಿಯಲ್ಲಿ ತುಂಬಿಕೊಂಡು ಗೋಡೌನ್‌ಗೆ ಮುಟ್ಟಿಸಿ ಮನೆಗೆ ಬೇಗ ಮುಟ್ಟುವುದು ಸಾಧ್ಯವೇ ಇಲ್ಲ. ವರ್ಷಾನುಗಟ್ಟಲೆ ಯಾವುದೇ ಆದಾಯ ಇಲ್ಲದೆ ಗೋಡೌನ್ ಬಾಡಿಗೆ ಕಟ್ಟಿಕೊಂಡು ಬಂದಿದ್ದಾಗಿದೆ. ಈಗ ಮತ್ತದೇ ಪರಿಸ್ಥಿತಿ ಬಂದರೆ ಎಲ್ಲಿಂದ ಹಣ ತರುವುದು?

ಸರ್ಕಾರ ಅನುಮತಿ ಕೊಟ್ಟರೂ ಈಗ ಕಲಾವಿದರು ಸೆಟ್‌ಗೆ ಬರಲು ಹೆದರುತ್ತಾರೆ. ಒಬ್ಬ ಮುಖ್ಯ ಕಲಾವಿದ ಸೆಟ್‌ಗೆ ಬರಲಿಲ್ಲ ಎಂದರೂ ನಲ್ವತ್ತು ಜನ ಅಂದಿನ ಕೆಲಸ ಕಳೆದುಕೊಳ್ಳುತ್ತಾರೆ. ಸಿನಿಮಾ ಶೂಟಿಂಗ್‌ನಲ್ಲಿ ನೀವು ಎಷ್ಟೇ ಜಾಗೃತಿ ವಹಿಸಿದರೂ ಏನಾಗುತ್ತದೆ ಎಂದು ಹೇಳುವುದು ಕಷ್ಟ. ಒಬ್ಬರ ಸಮೀಪ ಒಬ್ಬರು ಬರದೆ ಕೆಲಸ ಮಾಡುವುದು ಸಾಧ್ಯವೇ ಇಲ್ಲ ಅಲ್ಲಿ.

ಒಬ್ಬ ಹುಡುಗನಿಗೆ ದಿನಕ್ಕೆ ಕೊಡುವ ಎಂಟು ನೂರು ರೂಪಾಯಿಗಳು ಕೊಡುವವನಿಗೆ ಸಣ್ಣ ಮೊತ್ತವೇ ಆಗಿರಬಹುದು. ಆದರೆ ದಿನಕ್ಕೆ ಹನ್ನೆರಡು ಗಂಟೆ ದುಡಿಯುವ ಆ ಹುಡುಗನಿಗೆ ಅದು ದೊಡ್ಡ ಮೊತ್ತವೇ. ಆದರಿಂದಲೇ ಅವನ ಕುಟುಂಬ ನಡೆಯುತ್ತಿರುತ್ತದೆ. ಆ ಆದಾಯ ನಿಂತುಹೋದರೆ ಕುಟುಂಬದ ಊಟಕ್ಕೇ ತೊಂದರೆಯಾಗುತ್ತದೆ. ಊರಲ್ಲಿ ಹೊಲ ಇರುವವರು ಯಾರೂ ಈ ಕೆಲಸಕ್ಕೆ ಬರುವುದಿಲ್ಲ. ಹಾಗಾಗಿ ಇಲ್ಲಿ ಕೆಲಸ ಇಲ್ಲ, ಊರಿಗೆ ಹೋಗಿ ದುಡಿಯುತ್ತೇನೆ ಎನ್ನುವ ಪರಿಸ್ಥಿತಿಯಲ್ಲಿ ಯಾರೂ ಇಲ್ಲ. ಇದನ್ನೆಲ್ಲ ಯಾರಿಗೆ ಹೇಳುವುದು? ನಿರ್ಮಾಪಕರ ಬಳಿ ಹೇಳೋಣ ಅಂದರೆ ಅವರೂ ಕಷ್ಟದಲ್ಲಿಯೇ ಇದ್ದಾರೆ. ಮುಂದೆ ಏನಾಗುತ್ತದೋ ಏನೋ ಗೊತ್ತಿಲ್ಲ. ಯೋಚಿಸಿದರೆ ಭಯವಾಗುತ್ತದೆ.

—ಧರಣಿ ಗಂಗೇಪುತ್ರ, ಕಲಾ ವಿಭಾಗ

